**<u>ಗೌರವಾನ್ವಿತ ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ ನ್ಯಾಯಾಲಯ, ಅರಕಲಗೂಡು.</u>**

**<u>ದಿನಾಂಕಃ</u> 17.06.2026** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಂದುವರೆದ **<u>ಪಾಟೀ ಸವಾಲುಃ</u>** ಅರ್ಜಿದಾರರ ಪರ ವಕೀಲರು **ಶ್ರೀ. JS** ರವರಿಂದ.

ನನಗೆ 75 ವರ್ಷ. ನಾನು ವ್ಯವಸಾಯ ಮಾಡುತ್ತೇನೆ. ನಾನು 5ನೇ ತರಗತಿವರೆಗೆ ಓದಿರುತ್ತೇನೆ. ನನಗೆ ಶ್ರೀರಂಗಾಲದಲ್ಲಿ ಜಮೀನು ಇದೆ. ಅದರ ಸರ್ವೆ ನಂ. 127/2. ನನಗೆ ಓದಲು ಬರುತ್ತದೆ ಬರೆಯಲು ಬರುವುದಿಲ್ಲ. ನಾನು ಇಲ್ಲಿಯವರೆಗೂ ಯಾವುದೇ ಆಸ್ತಿ ಮನೆ ಜಮೀನನ್ನು ಖರೀದಿಸಿರುವುದಿಲ್ಲ. ಸಾಮಾನ್ಯವಾಗಿ ಯಾವುದೇ ಜಾಗವನ್ನು ಖರೀದಿ ಮಾಡುವ ಕಾಲಕ್ಕೆ ಆ ಜಾಗವು ಆ ಮಾಲೀಕರಿಗೆ ಹೇಗೆ ಬಂದಿರುತ್ತದೆ ಮತ್ತು ಅದರ ನಿಜವಾದ ಮಾಲೀಕರು , ಆ ವ್ಯಕ್ತಿ ಆ ಜಮೀನಿನ ಹಕ್ಕು ಮತ್ತು ಸ್ವಾದೀನದಾರರ ಎಂಬುದರ ಬಗ್ಗೆ ಯಾರೆಂದು ತಿಳಿದುಕೊಳ್ಳುತ್ತೇವೆ. ಮತ್ತು ಆ ಆಸ್ತಿಗೆ ಸಂಬಂದಪಟ್ಟ ದಾಖಲೆಗಳನ್ನು ಪರಿಶೀಲಿಸುತ್ತೇವೆ. ಆ ಕಾಲಕ್ಕೆ ದಾಖಲೆಗಳ ಮೇಲೆ ಅನುಮಾನ ಬಂದರೆ ಅದಕ್ಕೆ ಸಂಬಂದಪಟ್ಟ ನುರಿತವರಿಂದ ಅದರ ಬಗ್ಗೆ ತಿಳಿದುಕೊಳ್ಳುತ್ತೇವೆ ಎಂದರೆ ಸರಿ. ಆ ಜಮೀನಿನ ಮೇಲೆ ಸಾಲ ಮತ್ತು ಋಣಭಾರ ಇರುವುದರ ಬಗ್ಗೆ ಸಹಾ ಪರಿಶೀಲಿಸುತ್ತೇವೆ. ಜಮೀನುಗಳ ಮೇಲೆ ಯಾವುದೇ ವ್ಯಾಜ ಇರುವುದರ ಬಗ್ಗೆ ಹಾಗೂ ವ್ಯಾಜ್ಯ ಇದ್ದಲ್ಲಿ ಆ ವ್ಯಾಜ್ಯದ ಬಗ್ಗೆ ಮತ್ತು ಆ ವ್ಯಾಜ್ಯಕ್ಕೆ ಸಂಬಂದಪಟ್ಟ ಡಿಕ್ರಿ ಮತ್ತು ಇನ್ನಿತರ ದಾಖಲಾತಿಗಳನ್ನು ಪರಿಶೀಲಿಸುತ್ತೇವೆ. ಸದರಿ ಪರಿಶೀಲನೆ ಮಾಡುವ ಕಾಲಕ್ಕೆ ಯಾವುದೇ ತಕರಾರು ಇದ್ದಲ್ಲಿ, ಡಿಕ್ರಿ ಅಗಿದ್ದಲ್ಲಿ ಅಂತಹ ಆಸ್ತಿಗಳನ್ನು ಖರೀದಿಸುವುದಿಲ್ಲ.

ನಿಆರ್ 8 ರ ದಾಖಲಾತಿಯ ಸ್ವತ್ತಿನ ಚಕ್ಕುಬಂದಿ ನನಗೆ ಸರಿಯಾಗಿ ನೆನೆಪು ಇಲ್ಲಾ. ಸದರಿ ದಾಖಲಾತಿಯ ಮುಖಾಂತರ ಬನ್ನೂರು ಗ್ರಾಮದ ಸರ್ವೆ ನಂ 23/7 ರಲ್ಲಿ 36 ಗುಂಟೆ , 23/4 ರಲ್ಲಿ 1-17 ಗುಂಟೆ ಜಾಗವನ್ನು ಹರೀಶ್ ಎಂಬುವವರಿಂದ ಖರೀದಿಸಿರುತ್ತೇನೆ. ಸದರಿ ಆಸ್ತಿಯನ್ನು 2022 ರಲ್ಲಿ ಖರೀದಿಸಿರುತ್ತೇನೆ. ನಿಆರ್ 8 ರ ಪತ್ರವನ್ನು ಹರೀಶ್ ಮತ್ತು ಅವರ ಮಕ್ಕಳು ಬರೆದುಕೊಟ್ಟಿರುತ್ತಾರೆ. ಸದರಿ ದಾಖಲಾತಿಯಲ್ಲಿ ಖರೀದಿಸಿದ 36 ಗುಂಟೆ ಜಾಗದ ದಕ್ಷಿಣಕ್ಕೆ ಕಟ್ಟೆ , ಉತ್ತರಕ್ಕೆ ಶಂಕರಪ್ಪನ ಜಮೀನು , ಪಶ್ಚಿಮಕ್ಕೆ ಸರ್ಕಾರಿ ಓಣಿ , ಪೂರ್ವಕ್ಕೆ ಪುಟ್ಟೇಗೌಡರ ಜಮೀನು. ಮತ್ತು 1-17 ಗುಂಟೆ ಜಾಗದ ದಕ್ಷಿಣಕ್ಕೆ ಶಂಕರಪ್ಪನ ಜಮೀನು , ಉತ್ತರಕ್ಕೆ ಹರೀಶನ ಜಮೀನು , ಪಶ್ಚಿಮಕ್ಕೆ ಸರ್ಕಾರಿ ಓಣಿ , ಪೂರ್ವಕ್ಕೆ ಪುಟ್ಟೇಗೌಡರ ಜಮೀನು. ಸದರಿ ಹರೀಶ 1ನೇ ಎದುರುದಾರರ ಅಣ್ಣ ಎಂಬ ವಿಚಾರ ನನಗೆ ನಂತರದಲ್ಲಿ ತಿಳಿದಿರುತ್ತದೆ. ಮಾರಾಟಗಾರರು ಸದರಿ ಜಮೀನುಗಳು ಅವರ ತಂದೆಯಿಂದ ಅವರಿಗೆ ಬಂದಿರುವುದಾಗಿ ತಿಳಿಸಿರುತ್ತಾರೆ. ಖರೀದಿ ಮಾಡುವ ಪೂರ್ವದಲ್ಲಿ ನಾನು ಆ ಸ್ವತ್ತಿಗೆ ಸಂಬಂದಿಸಿದ ಪಹಣಿ ಮತ್ತು ಪೋಡಿ ಆದ ದಾಖಲಾತಿ ಪರಿಶೀಲಿಸಿರುತ್ತೇನೆ. ಸದರಿ ಸ್ವತ್ತುಗಳ ಮೇಲೆ ಯಾವುದಾದರೂ ವ್ಯಾಜ್ಯ ಇರುತ್ತದೆಯೇ ಅಥವಾ ಆ ಮುಂಚೆ ಇತ್ತೇ ಎಂಬುದನ್ನು ನಾನು ಹರೀಶನ ಬಳಿ ವಿಚಾರಿಸಿದ್ದು ಆತನು ಯಾವುದೇ ವ್ಯಾಜ್ಯ ಇಲ್ಲಾ ಎಂದು ತಿಳಿಸಿದರು. ಸರ್ವೆಯರ್ ಜಾಗದ ಬಳಿ ಬಂದು ಸರ್ವೆ ಮಾಡಿರುವ ಬಗ್ಗೆ ನಾನು ವಿಚಾರಿಸಿರುವುದಿಲ್ಲ. ಸದರಿ ಜಾಗವನ್ನು ಖರೀದಿಸುವ ಪೂರ್ವದಲ್ಲಿ ಸದರಿ ಜಾಗದ ಸರ್ವೆ ಮಾಡಿ ಹರೀಶನಿಗೆ ಬಂದ ಹಿಸ್ಸೆ ದಾಖಲಾತಿಯನ್ನು ನೋಡಿಲ್ಲ. ಅದಾ ನಂ.

49/07 ಮತ್ತು ಆರ್ ಎ 1/13ರ ತೀರ್ಪು ಮತ್ತು ದಾಖಲೆಗಳನ್ನು ನಾನು ಹರೀಶನಿಂದ ಪಡೆದು ಪರಿಶೀಲಿಸಿರುವುದಿಲ್ಲ.

ಸದರಿ ಆಸ್ತಿಗಳನ್ನು ಖರೀದಿ ಮಾಡುವ ಕಾಲಕ್ಕೆ ನಿಆರ್ 4 ರ ದಾಖಲಾತಿಯನ್ನು ನಾನು ನೋಡಿರುತ್ತೇನೆ. ನಿಆರ್ 4 ರ ದಾಖಲಾತಿಯಲ್ಲಿ 3ನೇ ಎದುರುದಾರರಿಗೆ ಆತನ ತಾಯಿಯಾದ ಚನ್ನಾಜಮ್ಮ ಮತ್ತು ಸಹೋದರನಾದ 1ನೇ ಪ್ರತಿವಾದಿಯು ಸದರಿ ಆಸ್ತಿಗಳಲ್ಲಿ ಸಾಲ ಪಡೆಯುವ ಉದ್ದೇಶದಿಂದ ಮಾತ್ರ ಆ ಆಸ್ತಿಗಳಿಗೆ 3ನೇ ಎದುರುದಾರರ ಹೆಸರು ದಾಖಲಿಸಬಹುದು ಎಂದಿರುತ್ತದೆ ಎಂದರೆ ಸಾಕ್ಷಿಯು 3ನೇ ಎದುರುದಾರರು ಕುಟುಂಬದ ಸಾಲವನ್ನು ತೀರಿಸುವ ಸಲುವಾಗಿ ತಾಯಿ ಮತ್ತು ಸಹೋದರರು ಬರೆದುಕೊಟ್ಟಿರುತ್ತಾರೆಂದು ತಿಳಿಸಿರುತ್ತಾರೆ. ಖರೀದಿ ಕಾಲಕ್ಕೆ ಈ ಪ್ರಕರಣ ಇರುವ ಬಗ್ಗೆ 3ನೇ ಎದುರುದಾರ ನನಗೆ ಹೇಳಿರುವುದಿಲ್ಲ. ಸದರಿ ಆಸ್ತಿ ಖರೀದಿ ಮಾಡುವ ಕಾಲಕ್ಕೆ 3ನೇ ಎದುರುದಾರರ ಜೊತೆಗೆ 1 , 4 ಮತ್ತು ಅರ್ಜಿದಾರರಿಗೆ ಸಮನಾದ ಹಿಸ್ಸೆ ಇರುವ ಬಗ್ಗೆ 3ನೇ ಎದುರುದಾರರು ತಿಳಿಸಿರುವುದಿಲ್ಲ. 3ನೇ ಎದುರುದಾರರು ನನಗೆ ಸಿವಿಲ್ ವ್ಯಾಜ್ಯ ಮತ್ತು ಈ ಪ್ರಕರಣ ಇರುವ ಬಗ್ಗೆ ತಿಳಿಸದೆ ಮೋಸ ಮಾಡಿ ನಿಆರ್ 8 ರ ದಾಖಲಾತಿಯನ್ನು ಮಾಡಿಕೊಟ್ಟಿರುತ್ತಾರೆ. ಬನ್ನೂರು ಗ್ರಾಮದ ಸರ್ವೆ ನಂ. 23 ರಲ್ಲಿ ಒಟ್ಟು 3 ಎಕರೆ 39 ಗುಂಟೆ ಜಾಗ 3ನೇ ಎದುರುದಾರರ ಹೆಸರಿನಲ್ಲಿತ್ತು ಎಂದರೆ ಇರಬಹುದು ಎಂದು ನುಡಿಯುತ್ತಾರೆ. ಸದರಿ ಆಸ್ತಿಗಳಲ್ಲಿ 3ನೇ ಎದುರುದಾರರಿಗೆ ಅಸಲು ದಾವಾ ಡಿಕ್ರಿಯಾದ ನಂತರ ಆತನಿಗೆ 32 ಗುಂಟೆ ಮಾತ್ರ ಸ್ವಾದೀನದಲ್ಲಿತ್ತು ಎಂದರೆ ಸಾಕ್ಷಿಯು ಆ ಕಾಲಕ್ಕೆ ಎಲ್ಲಾ ಜಾಗವು ಆತನಿಗೆ ಇರುವುದಾಗಿ ಹೇಳಿರುತ್ತಾರೆ. 1ನೇ ಎದುರುದಾರರು 3ನೇ ಎದುರುದಾರರಿಗೆ

ಎಲ್ಲಾ ಸಾಲವನ್ನು ನೀನೇ ತೀರಿಸು ಎಂದು ಹೇಳಿ ಬಿಟ್ಟು ಕೊಟ್ಟಿರುವುದಾಗಿ ನನಗೆ ಸದರಿ ಸ್ವತ್ತುಗಳನ್ನು ಖರೀದಿಸುವ ಕಾಲಕ್ಕೆ 3ನೇ ಎದುರುದಾರರು ತಿಳಿಸಿದ್ದರು. 3ನೇ ಎದುರುದಾರರ ಸಹೋದರಿಯರಾದ ಅರ್ಜಿದಾರರು ಮತ್ತು 4ನೇ ಎದುರುದಾರರ ಬಗ್ಗೆ ಖರೀದಿ ಮಾಡುವ ಕಾಲಕ್ಕೆ ಎಲ್ಲಾ ಸಾಲವನ್ನು ನೀನೇ ತೀರಿಸು ಎಂದು ಅವರು ಹೇಳಿರುವ ಬಗ್ಗೆ ನನಗೆ 3ನೇ ಎದುರುದಾರರು ಹೇಳಿರುವುದಿಲ್ಲ.

3ನೇ ಎದುರುದಾರರಿಗೆ ಸಹೋದರ ಮತ್ತು ಸಹೋದರಿಯರು ಇರುವ ಬಗ್ಗೆ ನಿಮಗೆ ತಿಳಿದ ನಂತರ 3ನೇ ಎದುರುದಾರರನ್ನು ನಿಆರ್ 8 ಕ್ಕೆ ಸಹಿ ಮಾಡಿಸಿಕೊಡಲು ನೀವು ಕೇಳಿರುತ್ತೀರಾ ಎಂದರೆ ಸಾಕ್ಷಿಯು ನನಗೆ ಆ ವಿಚಾರದ ಬಗ್ಗೆ ತಿಳಿದಿಲ್ಲ ಆದರೆ ಆತನು ಸದರಿ ಆಸ್ತಿಗಳಿಗೆ ಸಂಬಂದಪಟ್ಟ ದಾಖಲಾತಿ ನನ್ನ ಹೆಸರಿನಲ್ಲಿದ್ದು ನಾನು ಮತ್ತು ನ್ನನ್ನ ಮಕ್ಕಳು ಸಹಿ ಮಾಡುವುದಾಗಿ ತಿಳಿಸಿದರು ಎಂದು ನುಡಿಯುತ್ತಾರೆ. ಸದರಿ ಆಸ್ತಿಗಳನ್ನು ಖರೀದಿ ಮಾಡುವ ಕಾಲಕ್ಕೆ 3ನೇ ಎದುರುದಾರರಿಗೆ ಸಹೋದರ ಮತ್ತು ಸಹೋದರಿಯರು ಇರುವ ಬಗ್ಗೆ ಬನ್ನೂರು ಗ್ರಾಮಕ್ಕೆ ಬಂದು ನಾನು ವಿಚಾರಿಸಿರುವುದಿಲ್ಲ ಆದರೆ ಆ ಕಾಲಕ್ಕೆ ಆತನ ತಂದೆ ತಾಯಿ ತೀರಿಕೊಂಡಿರುವ ಬಗ್ಗೆ ತಿಳಿಸಿರುತ್ತಾರೆ. ನಿಆರ್ 8 ರ ದಾಖಲೆ ಆಗುವ ಪೂರ್ವದಲ್ಲಿ ನಾನು 3ನೇ ಎದುರುದಾರರ ಮನೆಗೆ ಹೋಗಿರುತ್ತೇನೆ. ಆ ಕಾಲಕ್ಕೆ 1 ಮತ್ತು 3ನೇ ಎದುರುದಾರರು ಅಕ್ಕ ಪಕ್ಕದ ಮನೆಯಲ್ಲಿ ವಾಸವಿದ್ದರಾ ಎಂದರೆ ಸಾಕ್ಷಿ ಇಲ್ಲಾ ಎಂದು ನುಡಿಯುತ್ತಾರೆ. 1ನೇ ಎದುರುದಾರರು ಬನ್ನೂರು ಗ್ರಾಮದಲ್ಲಿ ವಾಸ ಎಂಬ ವಿಚಾರವು ನನಗೆ ಇತ್ತೀಚೆಗೆ ತಿಳಿಯಿತು.

ಸದರಿ ಜಮೀನುಗಳನ್ನು ಖರೀದಿಸುವ ಕಾಲಕ್ಕೆ ಜಮೀನುಗಳನ್ನು ನಾನು ನೋಡಿರುತ್ತೇನೆ. ಸರ್ವೆ ನಂ. 23 ರಲ್ಲಿ 1ನೇ ಎದುರುದಾರರು ಸ್ವಾದೀನದಲ್ಲಿರುವ

ಜಮೀನನ್ನು ತೋರಿಸಿರುತ್ತಾರಾ ಎಂದರೆ ಸಾಕ್ಷಿ ಇಲ್ಲಾ ಎಂದು ನುಡಿಯುತ್ತಾರೆ. ಮುಂದುವರೆದು ಇತ್ತೀಚೆಗೆ 1ನೇ ಎದುರುದಾರರು ಉಳುವ ಕಾಲಕ್ಕೆ ನನಗೆ ತಿಳಿದಿರುತ್ತದೆ. ನಿಆರ್ 8 ರ ಸ್ವತ್ತುಗಳ ಪಕ್ಕದಲ್ಲಿಯೇ 1ನೇ ಎದುರುದಾರರ ಸ್ವತ್ತು ಇರುತ್ತದೆಯೇ ಎಂದರೆ ನನಗೆ ಆ ಬಗ್ಗೆ ತಿಳಿದಿಲ್ಲ.

ನ್ಯಾಯಾಲಯದ ಆದೇಶದ ಮೇರೆಗೆ ನ್ಯಾಯಾಲಯದ ಆಯುಕ್ತರು ಸರ್ವೆ ನಂ. 23 ರ ಜಾಗದ ಸರ್ವೆಗೆ ಬಂದ ಕಾಲಕ್ಕೆ ನಾನು ಆ ಸ್ಥಳದಲ್ಲಿ ಇರಲಿಲ್ಲ. ಹಾಗಾಗಿ ತಂಟೆತಕರಾರು ಮಾಡುವ ಸಂಭವ ಬಂದಿರುವುದಿಲ್ಲ. ಮತ್ತೊಮ್ಮೆ ನ್ಯಾಯಾಲಯದ ಆಯುಕ್ತರು ಪೋಲೀಸರ ಸಹಾಯದೊಂದಿಗೆ ಸರ್ವೆ ಮಾಡಲು ಬಂದಾಗಲೂ ನೀವು ಇದ್ದೀರ ಎಂದರೆ ಸಾಕ್ಷಿ ಇಲ್ಲಾ ಎಂದು ನುಡಿಯುತ್ತಾರೆ.

**(ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು , ಮುಂದುವರೆದ ಪಾಟೀ ಸವಾಲಿಗಾಗಿ ಮುಂದೂಡಲಾಯಿತು)**

(ಸಾಕ್ಷಿಯ ಹೇಳಿಕೆ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ. ಸರಿಯಿದೆ.

**ಪ್ರ.ಸಿವಿಲ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಧೀಶರು,**
**ಅರಕಲಗೂಡು.**